**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.31/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಬಸವರಾಜ ಅಣಜಿ | ಸಿಡಬ್ಲ್ಯೂ | 7 |
| ತಂದೆಯ ಹೆಸರು | ಚನ್ನಪ್ಪ | ಪಿಡಬ್ಲ್ಯೂ | 2 |
| ವಯಸ್ಸು | 45 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಗಣಜೂರ | | |

**ದಿಃ 14.08.2024 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.**

**1).** ಚಾ.ಸಾ-1 ನನ್ನ ಮಗ. ಚಾ.ಸಾ-6 ನನ್ನ ತಂದೆಯ ಒಂದನೇ ಹೆಂಡತಿ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಚಾ.ಸಾ-6 ರವರ ತಂದೆಯ ತಮ್ಮನ ಮಕ್ಕಳು. ನನ್ನ ತಂದೆಗೆ ಇಬ್ಬರೂ ಹೆಂಡತಿಯರು. ಒಂದನೇ ಹೆಂಡತಿ ಚಾ.ಸಾ-6 ಹನುಮವ್ವರವರಿಗೆ ಮಕ್ಕಳು ಆಗದ ಕಾರಣ ನನ್ನ ತಾಯಿ ಪಾರವ್ವರವರನ್ನು ಮದುವೆಯಾಗಿರುತ್ತಾರೆ. ನನ್ನ ತಾಯಿಗೆ 4 ಜನ ಮಕ್ಕಳು. ನನ್ನ ತಂದೆಯ ಇಬ್ಬರೂ ಹೆಂಡತಿಯರು ನನ್ನ ಜೊತೆ ಗಣಜೂರ ಗ್ರಾಮದಲ್ಲಿ ವಾಸ ಇದ್ದಾರೆ. ಚಾ.ಸಾ-6 ರವರಿಗೆ ಗಣಜೂರ ಗ್ರಾಮದಲ್ಲಿ ಸರ್ವೆ ನಂಬರಃ 111 ವಿಸ್ತೀರ್ಣ 04 ಎಕರೆ 08 ಗುಂಟೆ ಜಮೀನು ಇದೆ. ಈ ಜಮೀನನ್ನು ಚಾ.ಸಾ-6 ರವರ ತಂದೆಯ ತಮ್ಮ ಗೇಣಿಗೆ ಜಮೀನನ್ನು ವ್ಯವಸಾಯ ಮಾಡುತ್ತಿದ್ದರು.

**2)** ಚಾ.ಸಾ-6 ರವರಿಗೆ ಮಕ್ಕಳು ಇಲ್ಲದ ಕಾರಣ ನನ್ನ ಮಗನಾದ ಚಾ.ಸಾ-1 ರವರನ್ನು ಚಾ.ಸಾ-6 ರವರು ದತ್ತಕಕ್ಕೆ ಕೊಡುವಂತೆ ಕೇಳಿದ್ದರು. ಅದರಂತೆ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ದತ್ತುಪತ್ರವನ್ನು ನೊಂದಣಿ ಮಾಡಿಕೊಡುವ ಮೂಲಕ ನನ್ನ ಮಗನನ್ನು ಚಾ.ಸಾ-6 ರವರಿಗೆ ದತ್ತಕಕ್ಕೆ ಕೊಟ್ಟಿದ್ದೇನೆ. ಈ ಪ್ರಕರಣ ಆಗುವ 4-5 ವರ್ಷಗಳ ಹಿಂದೆ ಚಾ.ಸಾ-6 ರವರು ಚಾ.ಸಾ-1 ರವರನ್ನು ಕರೆದುಕೊಂಡು ಆರೋಪಿತರ ಮನೆಗೆ ಹೋಗಿ ಚಾ.ಸಾ-6 ರವರು ಆರೋಪಿತರ ಬಳಿ ನನಗೆ ಬರಬೇಕಾಗಿರುವ ಆಸ್ತಿ ಕೊಡಿ ಎಂದು ಕೇಳಿದ್ದರು. ಆಗ ಆರೋಪಿತರು ಹೀನಾಮಾನವಾಗಿ ಬೈಯ್ದು, ಆಸ್ತಿ ಕೊಡುವದಿಲ್ಲ ಎಂದು ಬೈದು, ದೂಡಿ ಕಳುಹಿಸಿದರು.

**3)** ನಂತರ ಚಾ.ಸಾ-6 ರವರು ಬಂದು ತಹಶೀಲ್ದಾರ ನ್ಯಾಯಾಲಯದಲ್ಲಿ ಜಮೀನನ್ನು ಆರೋಪಿತರ ಹೆಸರಿಗೆ ವರ್ಗಾವಣೆಯಾಗಿರುವದನ್ನು ಪ್ರಶ್ನಿಸಿ ಆಕೆಯ ಹೆಸರಿಗೆ ಖಾತೆಗೆ ವರ್ಗಾವಣೆ ಮಾಡಿಸಿಕೊಳ್ಳಲು ಪ್ರಕರಣ ದಾಖಲಿಸಿದ್ದಾರೆ. ಈಗ್ಗೆ ಎರಡು ವರ್ಷಗಳ ಹಿಂದೆ ಮಧ್ಯಾಹ್ನ 2-00 ಘಂಟೆ ಸಮಯದಲ್ಲಿ ನಾನು, ಚಾ.ಸಾ-1, ಚಾ.ಸಾ-6 ರವರು ತಹಶೀಲ್ದಾರ ಕಛೇರಿಯಲ್ಲಿ ಇದ್ದೇವು. ಆಗ ಆರೋಪಿತರು ಬಂದು ಆಸ್ತಿ ಬೇಕಾ ಎಂದು ಹೀನಾಮಾನವಾಗಿ ಬೈಯ್ದು ನನ್ನ ಎದೆಯ ಮೇಲಿನ ಅಂಗಡಿಯನ್ನು ಹಿಡಿದು, ಮುಷ್ಟಿಮಾಡಿ 1 ನೇ ಆರೋಪಿ ನನ್ನ ಮುಖಕ್ಕೆ ಹೊಡೆದ, 2 ನೇ ಆರೋಪಿ ಕಾಲಿನಿಂದ ಜಾಡಿಸಿ ಒದ್ದ. ನಾನು ಕೆಳಕ್ಕೆ ಬಿದ್ದಾಗ 1 ನೇ ಆರೋಪಿ ಬಂದು ನನ್ನ ಕೈ ಮೇಲೆ ಕಾಲಿನಿಂದ ತುಳಿದ. 2 ನೇ ಆರೋಪಿ ನನ್ನ ತೊಡೆಯ ಮೇಲೆ ಕಾಲಿಟ್ಟು ತುಳಿದು ಅವಾಚ್ಯ ಶಬ್ದಗಳಿಂದ ಬೈದು, ಆಸ್ತಿ ವಿಚಾರಕ್ಕೆ ಬಂದರೆ ನಿನ್ನ ಜೀವಂತವಾಗಿ ಬಿಡುವದಿಲ್ಲ, ಸುಟ್ಟುಬಿಡುತ್ತೇನೆ ಎಂದು ಬೆದರಿಕೆ ಹಾಕಿದರು.

**4)** ನಂತರ ಆರೋಪಿತರು ಚಾ.ಸಾ-6 ರವರನ್ನು ಕರೆದುಕೊಂಡು 2 ನೇ ಆರೋಪಿ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ಚಾ.ಸಾ-6 ರವರನ್ನು ಮಧ್ಯದಲ್ಲಿ ಕೂರಿಸಿಕೊಂಡು 1 ನೇ ಆರೋಪಿ ಚಾ.ಸಾ-6 ರವರನ್ನು ಹಿಂದೆ ಹಿಡಿದುಕೊಂಡು ಕುಳಿತು ಕರೆದುಕೊಂಡು ಹೋದರು. ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ಮಾರನೇ ದಿನ ಚಾ.ಸಾ-1 ರವರು ಬಂದು, ಆರೋಪಿತರು ಚಾ.ಸಾ-6 ರವರನ್ನು ಹಳೆ ಪಿ.ಬಿ.ರಸ್ತೆಯ ಬೈಪಾಸ್ ಬ್ರಿಡ್ಜ ಬಳಿ ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗಿ, ಅಲ್ಲಿಂದ ಕಾರಿನಲ್ಲಿ ಜಲ್ಲಾಪುರ ಗ್ರಾಮಕ್ಕೆ ಶಾಂತಪ್ಪರವರ ಮನೆಗೆ ಕರೆದುಕೊಂಡು ಹೋಗಿ ಶಾಂತಪ್ಪರವರಿಗೆ ನಾವು ಬರುವವರೆಗೂ ಚಾ.ಸಾ-6 ರವರು ಇಲ್ಲೇ ಇರಲಿ ಎಂದು ಹೇಳಿದ್ದಾರೆ ಎಂದು ಹೇಳಿದ. ಶಾಂತಪ್ಪರವರ ಮನೆಯಿಂದ ಚಾ.ಸಾ-6 ರವರನ್ನು ಪೊಲೀಸರು ಪೊಲೀಸ ಠಾಣೆಗೆ ಕರೆದುಕೊಂಡು ಬಂದಿದ್ದಾರೆ ಎಂದು ನನ್ನ ಮಗ ಹೇಳಿದ.

**5)** ಚಾ.ಸಾ-1 ರವರು ಆ ದಿನ ನನ್ನ ಆಸ್ಪತ್ರೆಗೆ ದಾಖಲಿಸಿ ದೂರು ಕೊಟ್ಟಿದ್ದ. ಗಲಾಟೆಯಾದ ಮಾರನೇ ದಿನ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ದ್ವಿಚಕ್ರ ವಾಹನವನ್ನು ಜಪ್ತು ಮಾಡುವ

ಸಮಯದಲ್ಲಿ ತೆಗೆದ ಪೋಟೋವನ್ನು ತೋರಿಸಿದ್ದು, ಅದರಲ್ಲಿನ ದ್ವಿಚಕ್ರ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಪೋಟೋವನ್ನು ನಿ.ಪಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಎನ್.ಎಸ್ ವಕೀಲರು ಪಾಟೀ ಸವಾಲಿಗೆ ಹಿರಿಯ ವಕೀಲರು ಧಾರವಾಡ ನ್ಯಾಯಾಲಯಕ್ಕೆ ಹೋಗಿದ್ದಾರೆ ಎಂದು ಕಾರಣ ನೀಡಿ ಕಾಲಾವಕಾಶವನ್ನು ಕೋರಿರುತ್ತಾರೆ. ಸದರಿ ಕಾರಣವು ಸಮಂಜಸವಾದ ಕಾರಣ ಆಗಿರುವದಿಲ್ಲ, ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.